# ಭೀಷ್ಮನಿಗೆ ಯುಧಿಷ್ಠಿರ ಕೇಳಿದ

'ನಿನ್ನ ಕೊಲ್ಲೊ ಉಪಾಯ ನೀನೇ ಹೇಳಿಕೊಡಬೇಕು ತಂದೇ'

**ಕೃಷ್ಣ:** ನಿನ್ನ ಮಾತು ಹಿಡಿಸಿತು ನನಗೆ

ಅವನು ಬರೀ ದೇವವ್ರತ ಅಲ್ಲ ಭೀಷ್ಮ

ಕಣ್ಣಲ್ಲೇ ಸುಟ್ಟುಹಾಕಿ ಬಿಡತಾನೆ

ಕಡಲಿಗೆ ಹರಿಯೋ ನದಿಯ ಮಗ ಅವನು

ನಿನ್ನ ಜತೇಲಂತೂ ಅವನು ನಿಜ ಬಿಟ್ಟು ಬೇರೆ ಹೇಳಲ್ಲ

ಅವನ ಹತ್ತಿರ ಹೋಗಿ ಅವನನ್ನೇ ಕೇಳೋಣ

**ಸಂಜಯ:** ವೀರರಾದ ಪಾಂಡವರು ಕೃಷ್ಣನನ್ನು ಕರಕೊಂಡು ತಮ್ಮ ಪೂರ್ವಿಕನ ಹತ್ತಿರಕ್ಕೆ ಹೋದರು.

ಕತ್ತಿ, ಕವಚ ಎಲ್ಲಾ ಕಳಚಿಟ್ಟು ಭೀಷ್ಮನ ಮನೆಗೆ ಬಂದರು. ಅಲ್ಲಿ ಭೀಷ್ಮನಿಗೆ ತಲೆ ಮುಟ್ಟಿ ನಮಸ್ಕಾರ ಮಾಡಿದರು ಶರಣು ಮಾಡಿಕೊಂಡರು.

ಅವರನ್ನು ಕಂಡು ಉದ್ದ ತೋಳು ಚಾಚತಾ ಅವರೆಲ್ಲರ ತಾತ

**ಭೀಷ್ಮ:** 'ಬಾರಪ್ಪ ಕೃಷ್ಣ, ಬಾ ಧನಂಜಯ, ಬಾ ಧರ್ಮಪುತ್ರ, ಭೀಮ ಬಾ ಬಾ, ಅವಳಿ ಜವಳಿಗಳು ಬನ್ನಿ, ಬನ್ನಿ.

ನಿಮ್ಮ ಅಕ್ಕರೆ ಹೆಚ್ಚಿಸೋದಕ್ಕೆ ಏನು ಮಾಡಲಿ ಹೇಳು ಮಗು

ಎಷ್ಟೋ ಕಷ್ಟ ಆದರೂ ಸರೀನೇ ಏನೇ ಆದರೂ ಪರವಾಗಿಲ್ಲ ಮಾಡಿಕೊಡತೀನಿ

ಯುದ್ಧ ತೊರೆದುಬಿಡು ಅನ್ನೋದನ್ನ ಬಿಟ್ಟು ಬೇರೆ ಏನು ಬೇಕಾದರೂ ಕೇಳು'

ಹಾಗಂತ ಅಕ್ಕರೆ ತುಂಬಿಕೊಂಡು ಮತ್ತೆ ಮತ್ತೆ ಕೇಳಿದ. ರಾಜ ದೀನನಾಗಿ ಹೀಗಂದ

ಯುಧಿಷ್ಠರ: ನಿನಗೆ ಗೊತ್ತಿಲ್ಲದ್ದು ಏನಿದೆ ಬಲ್ಲವನೆ. ನಾವು ಗೆಲ್ಲೋದು ಹೇಗೆ? ರಾಜ್ಯ ಪಡೆಯೋದು ಹೇಗೆ? ನಮ್ಮ ಪ್ರಜೆಗಳ ಗೊಂದಲ ನೀಗೋದು ಹೇಗೆ?

ಯುದ್ಧದಲ್ಲಿ ನಿನ್ನನ್ನ ತಡಕೊಳ್ಳೋದು ಉಂಟಾ?

ಒಂದು ಸಣ್ಣ ಐಬೂ ತೋರಿಸಲ್ಲ ರಣದಲ್ಲಿ ನಿನ್ನ ಬಿಲ್ಲು ಸದಾ ಮಂಡಲಾಕಾರವಾಗೇ ಕಾಣತಿರತ್ತೆ.

ಬಾಣ ತೆಗೆಯೋದೂ ಗೊತ್ತಾಗಲ್ಲ, ಹೂಡೋದೂ ಗೊತ್ತಾಗಲ್ಲ, ಬಿಡೋದೂ ಗೊತ್ತಾಗಲ್ಲ. ಇನ್ನೊಬ್ಬ ಸೂರ್ಯನಂತೆ ಕಣ್ಣು ಚುಚ್ಚತಾನೇ ಇರತೀಯಾ ನೀನು.

ರಥ, ಕುದುರೆ, ಕಾಲಾಳು, ಆನೆ ಅಂತ ಒಂದೂ ಬಿಡದೆ ಧ್ವಂಸ ಮಾಡಿಬಿಡತೀಯಲ್ಲಾ, ನಿನ್ನ ತಡೆಯೋ ಗಂಡಸೇ ಇಲ್ಲವಲ್ಲಾ

ಇನ್ನು ನಿನ್ನ ಜಯಿಸೋದು ಎಲ್ಲಿಂದ ಬರಬೇಕು?

ನೀನು ಬಾಣದ ಮಳೆ ಸುರಿಸತಾ ನಿಂತುಬಿಡತೀಯ ನನ್ನ ಸೇನೆಯೆಲ್ಲಾ ನಾಶ ಆಗತಾ ಇರತ್ತೆ ಇಂಥ ಯುದ್ಧ ಗೆಲ್ಲೋದಾದರೂ ಹೇಗೆ? ನಮಗೆ ರಾಜ್ಯ ದಕ್ಕೋದು ಹೇಗೆ?

ತಾತ ಹೇಳು, ನಮ್ಮ ಸೈನ್ಯಾನ ಕಾಪಾಡಿಕೊಳ್ಳೋದು ಹೇಗೆ?

ಹೇಳಿಕೊಡಬೇಕು ನೀನೇ

ನಿನ್ನ ಕೊಲ್ಲೋ ಉಪಾಯ ನೀನೇ ಹೇಳಿಕೊಡಬೇಕು ತಂದೇ.

**ಸಂಜಯ:** ಆಗ ಪಾಂಡುವಿಗೂ ಹಿರೀಕನಾದ ಶಂತನುವಿನ ಮಗ

**ಭೀಷ್ಮ:** 'ನೋಡು, ನಿನಗೂ ಎಲ್ಲಾ ಗೊತ್ತು

ಇಷ್ಟಂತೂ ಸತ್ಯ. ನಾನು ಬದುಕಿರೋ ತನಕ ನಿಮಗೆ ಗೆಲುವು ಸಾಧ್ಯ ಇಲ್ಲ.

ನನ್ನ ಗೆದ್ದುಬಿಟ್ಟರಿ ಅನ್ನಿ ಉಳಿದದ್ದೆಲ್ಲ ಸಲೀಸು

ನನ್ನ ಬೇಗ ಕೊಲ್ಲೋಕೆ ನೋಡಿ, ಅಷ್ಟೇನೆ. ನಾನೇ ಒಪ್ಪಿಗೆ ಕೊಡತಾ ಇದೀನಿ

ನಿಮಗೆ ಇಷ್ಟ ಬಂದ ಹಾಗೆ ನನ್ನ ಹೊಡೆಯಿರಿ

ನಾ ಸತ್ತರೆ ಎಲ್ಲರೂ ಸತ್ತ ಹಾಗೆ ಅದಕ್ಕೆ ದಾರಿ ಪತ್ತೆ ಮಾಡಿ.

**ಯುಧಿಷ್ಠಿರ:** ರಣದಲ್ಲಿ ನೀ ಮುನಿದು ಕೈಯಲ್ಲಿ ಬಿಲ್ಲು ಹಿಡಿದು ನಿಂತರೆ ವಜ್ರಪಾಣೀನೂ ಏಗಲ್ಲ, ವರುಣಾನೂ ಇಲ್ಲ, ಯಾವನೂ ಇಲ್ಲ.

ಉಪಾಯಾನೂ ನೀನೇ ಹೇಳಿಕೊಡಬೇಕು ತಂದೇ.

**ಭೀಷ್ಮ:** ಪಾಂಡುವಿನ ಮಗನೆ, ನೀನು ಹೇಳೋದು ಯಥಾರ್ಥವೇ

ನಾನು ಕೈಯಲ್ಲಿ ಶಸ್ತ್ರ, ಬಿಲ್ಲು ಬಾಣ ಹಿಡಿದು ನಿಂತಿರೋ ತನಕ ಯಾರೂ ಗೆಲ್ಲಕ್ಕಾಗಲ್ಲ, ದೇವತೆಗಳೇ ಇಂದ್ರನ ಜತೆ ಬಂದರೂ ಏಗಲಾರರು. ಆದರೆ ನಾನು ಶಸ್ತ್ರಗಳನ್ನು ಕೆಳಗಿಟ್ಟರೆ ಮಹಾರಥರಿಗೆ ನನ್ನನ್ನು ಕೊಲ್ಲುವುದು ಸಾಧ್ಯ ನೋಡು.

ಶಸ್ತ್ರ ಕಳಚಿಟ್ಟೋನು, ಕೆಳಗೆ ಬಿದ್ದೋನು, ಕವಚ ಧ್ವಜ ಕಿತ್ತುಹೋದವನು,

ಓಡತಾ ಇರೋನು, ಹೆಂಗಸರು, ಹೆಂಗಸಿನ ಹೆಸರಿಟ್ಟುಕೊಂಡವನು

ಮೃತಿ ಬಂದೋನು, ಅಪ್ಪನಿಗೆ ಒಬ್ಬನೇ ಮಗನಾಗಿರೋನು, ಯೋಗ್ಯ ಅಲ್ಲದವನು

ಇಂಥವರ ಜತೆ ನನಗೆ ಯುದ್ಧ ಆಗಿಬರದು

ಅದರಲ್ಲೂ ಅಮಂಗಳದ ಧ್ವಜ ನೋಡಿದರೆ ಯುದ್ಧ ಮಾಡಲ್ಲ ಅಂತ ತುಂಬಾ ಹಿಂದೇನೇ ತೀರ್ಮಾನ ಮಾಡಿಬಿಟ್ಟಿದೀನಿ.

ನಿಮ್ಮ ಸೇನೇಲಿ ಆ ದ್ರುಪದನ ಮಗ ಶಿಖಂಡಿ ನಿಜ, ಅವನು ಶೂರ, ಮಹಾರಥ. ಆದರೆ ಮೊದಲು ಹೆಣ್ಣಾಗಿದ್ದ, ಆಮೇಲೆ ಗಂಡಸಾದ. ಇರೋ ವಿಷಯ ನಿಮಗೂ ಗೊತ್ತು

ಅರ್ಜುನ ಯುದ್ಧದಲ್ಲಿ ಶೂರ ತಾನೆ. ಆ ಶಿಖಂಡೀನ ಮುಂದಿಟ್ಟುಕೊಳ್ಳಲಿ, ನನ್ನನ್ನು ಮೊನಚಾದ ಬಾಣದಿಂದ ಚುಚ್ಚಿ ಚುಚ್ಚಿ ತುಂಡು ತುಂಡು ಮಾಡಲಿ.

ಆ ಶಿಖಂಡಿಯ ಬಾವುಟ ಅಮಂಗಳದ್ದು. ಅದಕ್ಕಿಂತ ಹೆಚ್ಚಾಗಿ ಅವನು ಹಿಂದೆ ಹೆಣ್ಣಾಗಿದ್ದವನು. ಏನೇ ಮಾಡಿದರೂ ಅವನನ್ನಂತೂ ನಾನು ಹೊಡೆಯೋಕ್ಕೆ ಹೋಗಲ್ಲ. ತಕ್ಷಣ ಈ ಅವಕಾಶ ಬಳಸಿಕೊಂಡು ಧನಂಜಯ ನನ್ನ ತಲೇನ ಚೂರು ಚೂರು ಮಾಡಲಿ.

ನನ್ನ ಕೊಲ್ಲೋದಕ್ಕೆ ಖುತದಲ್ಲಿ ಈ ಮಹಾನುಭಾವ ಕೃಷ್ಣ, ಪಾಂಡವರಲ್ಲಿ ಧನಂಜಯ ಇಬ್ಬರಿಗೇ ಆಗೋದು. ಆದ್ದರಿಂದ ಅವನು ಬಾಣದಿಂದಲೋ ಶಸ್ತ್ರದಿಂದಲೋ ನನ್ನೆದುರು ನಿಂತು ನನ್ನ ಬೀಳಿಸಲಿ. ಕುಂತೀ ಮಗೂ, ನಾನು ಹೇಳಿದ ಹಾಗೆ ಮಾಡು. ಆಮೇಲೆ ಧೃತರಾಷ್ಟ್ರನ ಮಕ್ಕಳನ್ನೆಲ್ಲಾ ಒಟ್ಟಿಗೆ ತೀರಿಸಿಬಿಡಬಹುದು.

**ಸಂಜಯ:** ಇಷ್ಟನ್ನ ತಿಳಕೊಂಡು ತಮ್ಮಜ್ಜ ಭೀಷ್ಮನಿಗೆ ನಮಸ್ಕಾರ ಮಾಡಿ ಶಿಬಿರ ಸೇರಿಕೊಂಡರು.

ಪರಲೋಕ ದೀಕ್ಷೆ ತಗೊಂಡ ಹಾಗೆ ಭೀಷ್ಮ ಆಡಿದ ಮಾತನ್ನ ನೆನೆಸಿಕೋತಾ ಅರ್ಜುನ ದುಃಖದಲ್ಲಿ ಬೇಯುತ್ತಾ ಇದ್ದ. ನಾಚಿಕೆ ಪಡತಾ ಹೀಗಂದ:

**ಅರ್ಜುನ:** ಅವನು ನಮ್ಮ ಗುರು, ಕುಲಕ್ಕೆ ಹಿರಿಯ. ತನ್ನ ಮನಸ್ಸನ್ನೆಲ್ಲಾ ನಮ್ಮ ಏಳಿಗೆಗೇ ಮುಡುಪಿಟ್ಟವನು ಮಹಾ ಬುದ್ಧಿಶಾಲಿ. ಎಲ್ಲಕ್ಕಿಂತ ಮುಖ್ಯವಾಗಿ ಅವನು ನಮ್ಮ ತಾತ. ಅವನ ಜತೆ ಹೇಗಪ್ಪಾ ಯುದ್ಧ ಮಾಡಲಿ?

ಆಗ ನಾನಿನ್ನೂ ಕೂಸು

ದೂಳಲ್ಲಿ ಆಡಿಕೊಂಡು ಬಂದು ಅವನ ಮೈಯೆಲ್ಲಾ ರಾಡಿ ಮಾಡಿಬಿಡತಿದ್ದೆ

ಒಂದು ಸಾರಿ ಹಾಗೇನೇ ಅವನ ತೊಡೆ ಏರಿ ಕೂತು

'ಅಪ್ಪಾ' ಅಂದರೆ 'ಅಪ್ಪ ಅಲ್ಲ ಕಂದಾ, ಅಪ್ಪನ ಅಪ್ಪ' ಅಂತ ಅಂದ

ತುಂಬ ದೊಡ್ಡ ಮನಸ್ಸು ಅವನದು. ಮಹಾತ್ಮ ಅವನು

ಅವನನ್ನು ನಾನು ಕೊಲ್ಲಬೇಕಾ?

ನನ್ನ ಇಡೀ ಸೈನ್ಯಾನೇ ತೀರಿಸಿಬಿಡಲಿ ಬೇಕಾದರೆ, ಅಂಥ ದೊಡ್ಡ ಮನಸಿನವನ ಮೇಲೆ ಯುದ್ಧ ಮಾಡಲ್ಲ ನಾನು

ನಾನು ಗೆದ್ದರೂ ಒಂದೇ, ಸತ್ತರೂ ಅಷ್ಟೇ ಅವನ ಜತೆ ಯುದ್ಧ ಮಾಡಲ್ಲ.

ನಿನಗೇನನ್ನಿಸತ್ತೆ ಹೇಳು ಕೃಷ್ಣ

ಪುರಾತನ ಧರ್ಮ ತಿಳಿದ ನಾನು,

ಬಿಲ್ಲು ಬಾಣ ಕೆಳಗಿಟ್ಟವನನ್ನ

ಅದೂ ನನ್ನ ಅಜ್ಜನನ್ನ ಕೊಲ್ಲಬೇಕಂತೆ!

ಎಲ್ಲಾದರೂ ಉಂಟಾ!

(ಈ ಅಧ್ಯಾಯ ಇಲ್ಲಿಗೆ ಮುಗಿಯೋದಿಲ್ಲ. ಇನ್ನೂ ಏಳೆಂಟು ಶ್ಲೋಕಗಳಿವೆ. ಕೃಷ್ಣ ಅರ್ಜುನನನ್ನು ಒಪ್ಪಿಸುವುದು ಶಿಖಂಡಿ ಕೊಲ್ಲತಾನೆ, ನಾನು ಉಳಿದವರನ್ನ ಕೊಲ್ಲೋದು ತಾನೆ ಅಂತ ಅರ್ಜುನ ಒಪ್ಪಿಕೊಳ್ಳೋದು)

■